ಶ್ರೀ ಬಿ. ರಾಚಯ್ಯ.—ಕರ್ನಾಟಕ ರಾಜ್ಯದಿಂದ ಪ್ರತಿ ವರ್ಷವೂ ಹಾಜ್ ಯಾತ್ರೆಗೆ ಹೋಗುವವರು ಕಾಲರಾ ಚುಚ್ಚುಮದ್ದು ಮಾತ್ರ ತೆಗೆದುಕೊಂಡು ಇಂಟರ್‌ನ್ಯಾಷನಲ್ ವ್ಯಾಕ್ಸಿನೇಷನ್ ಸರ್ಟಿಫಿಕೇಟ್ ಪಡೆದುಕೊಳ್ಳಬಹುದಾಗಿತ್ತು. ಆದರೆ ಈ ವರ್ಷ ಯಾತ್ರೆಗೆ ಹೋಗುವವರು ಕಾಲರಾ ಚುಚ್ಚುಮದ್ದು ಅಲ್ಲದೆ ಮೆನಿನ್‌ಜೈಟಿಸ್ ಚುಚ್ಚುಮದ್ದು ಕೂಡ ಹಾಕಿಸಿಕೊಳ್ಳಬೇಕೆಂದು ಸೌದಿ ಅರೆಬೀಯಾ ಸರ್ಕಾರ ಆದೇಶ ನೀಡಿದೆ ಎಂದು ಭಾರತ ಸರ್ಕಾರವು ತಿಳಿಸಿರುತ್ತದೆ. ಆದರ ಪ್ರಕಾರ ಮೆನಿನ್‌ಜೈಟಿಸ್ ಚುಚ್ಚುಮದ್ದು ಹಾಕಿಕೊಳ್ಳದೆ ಹೋಗುವ ಪ್ರಯಾಣಿಗಳನ್ನು ಸೌದಿ ಅರೇಬಿಯಾ ದೇಶಕ್ಕೆ ಹೋಗಲು ನಿಷೇಧಿಸಿರುತ್ತದೆ, ಆದಕಾರಣ ಈ ಮೆನಿನ್‌ಜೈಟಿಸ್ ಚುಚ್ಚುಮದ್ದನ್ನು ತುರ್ತ್ತಾಗಿ ೨೫೦೦ ಡೋಸ್‌ಗಳಷ್ಟು ಪ್ರಮಾಣದಲ್ಲಿ ನವದೆಹಲಿಯಿಂದ ಒಂದೂವರೆ ತಿಂಗಳ ಹಿಂದೆ ತರಿಸಿ ಹಜ್ ಯಾತ್ರಿಕರಿಗೆ ಬೆಂಗಳೂರಿನ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಚುಚ್ಚುಮದ್ದು ಕೊಡಲು ವ್ಯವಸ್ಥೆ ಮಾಡಲಾಗಿದೆ.

ಹಾಜ್ ಯಾತ್ರಿಕರು ಈ ಚುಚ್ಚುಮದ್ದನ್ನು ಬೆಂಗಳೂರಿನ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಹಾಕಿಸಿಕೊಂಡು ಸರ್ಟಿಫಿಕೇಟ್ ಪಡೆದುಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಹಾಜ್ ಸಮಿತಿಯವರಂ ಎಲ್ಲಾ ಹಾಜ್ ಯಾತ್ರಿಕರಿಗೆ ಪತ್ರಿಕಾ ಪ್ರಕಟಣೆಗಳ ಮೂಲಕ ಹಾಗೂ ಲಿಖಿತ ಮೂಲಕ ತಿಳಿಸಲಾಗಿದೆ. ಈ ಚುಚ್ಚುಮದ್ದನ್ನು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಕೊಡಲಂ ವ್ಯವಸ್ಥೆ ಮಾಡಬೇಕೆಂದು ಬೇಡಿಕೆಗಳು ಬಂದಿರುತ್ತವೆ. ಆದರೆ ಈ ಕೆಳಗೆ ನಮೂದಿಸಿರುವ ಕಾರಣಗಳಿಂದ ಆ ವ್ಯವಸ್ಥೆಯನ್ನು ಮಾಡಲು ತೊಂದರೆಯಾಗಿದೆ.

೧) ಈ ಮೆನಿನ್‌ಜೈಟಿಸ್ ಚುಚ್ಚುಮದ್ದು ಈ ರಾಜ್ಯಕ್ಕೆ ಸ್ವಲ್ಪ ಪ್ರಮಾಣದಲ್ಲಿ (೨,೫೦೦ಡೋಸ್) ಮಾತ್ರ ಲಭಿಸಿರುತ್ತದೆ.

೨) ಈ ಚುಚ್ಚುಮದ್ದು ೫೦ ಎಂ. ಎಲ್. ಸೀಸೆಗಳಲ್ಲಿ ಶೇಖರಿಸಿದ್ದು, ಒಂದು ಸಲ ಈ ಸೀಸೆಯನ್ನು ತೆರೆದ ಕೂಡಲೇ ೮.೦೦ ಘಂಟೆಯೊಳಗೆ ಉಪಯೋಗಿಸ ಬೇಕಾಗುತ್ತದೆ. ಮಂತ್ತು ೫೦ ಮಂದಿ ಯಾತ್ರಿಕರು ಸೇರಿದ್ದಲ್ಲಿ ಮಾತ್ರ ಈ ಸೀಸೆಯನ್ನು ತೆರೆಯಬೇಕಾಗುತ್ತದೆ. ಇಲ್ಲದಿದ್ದಲ್ಲಿ ಈ ಅತಿ ಪ್ರಾಮುಖ್ಯದ ಚುಚ್ಚುಮದ್ದು ವ್ಯರ್ಥವಾಗುವ ಸಂಭವವಿದೆ.

೩) ಈ ರಾಜ್ಯದಲ್ಲಿ ಇದನ್ನು ಪ್ರಥಮ ಬಾರಿ ಉಪಯೋಗಿಸುವುದರಿಂದ, ಆದರಿಂದ ಉಂಟಾಗುವ ತೊಡಕುಗಳು ಮತ್ತು ಅನರ್ಥಗಳನ್ನು ಎದುರಿಸಲಿಕ್ಕೆ ಮಾಡಬೇಕಾದ ವ್ಯವಸ್ಥೆಯನ್ನು ಜಿಲ್ಲಾ ಕೇಂದ್ರಗಳಲ್ಲಿ ತಕ್ಷಣ ಮಾಡಲು ಸಾಧ್ಯವಾಗಲಾರದು. ಈ ಕಾರಣಗಳಿಂದ ಈ ಚುಚ್ಚುಮದ್ದನ್ನು ಬೆಂಗಳೂರಿನಲ್ಲಿರುವ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ.

೩ ಹುಕ್ಕೇರಿ ತಾಲ್ಲೂಕಿನಲ್ಲಿ ಹೈಸ್ಕೂಲುಗಳಿರುವ ಕಡೆ ಗ್ರಂಥಾಲಯಗಳನ್ನು ಪ್ರಾರಂಭಿಸುವುದರ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನಲ್ಲಿ ಸರ್ಕಾರಿ ಹಾಗೂ ಖಾಸಗಿ ಹೈಸ್ಕೂಲ್‌ಗಳಿರುವ ಗ್ರಾಮಗಳಲ್ಲಿ ಜಿಲ್ಲಾ ಗ್ರಂಥಾಲಯಗಳಿಂದ ಗ್ರಂಥಾಲಯಗಳನ್ನು ಪ್ರಾರಂಭಿಸಲು ಯಾವುದೇ ಕಾರ್ಯಕ್ರಮ ನಡೆದಿಲ್ಲ. ಕಣಗಲ, ಮತ್ತೀವಡೆ, ಸಂಕೇಶ್ವರ, ಹೆಬ್ಬಾಳ್, ದರ್ಣವಾಡಿ, ನಿಡಸೋಸಿ, ಉಳಾಗಡ್ಡಿ, ಖಾನಾಪುರ, ಯಮಕನಮರಡಿ, ಮಾಸ್ತಿ ಹೂಣೂರು ಸೆಂಟರ್, ದಡ್ಡಿ, ಹುಕ್ಕೇರಿ, ಯಾದಗುಡ್ ವಿಲಿವಾನೇಳಿ, ಯರಗಟ್ಟಿ ಹಿಡಕಲ್ ಡ್ಯಾಮ್ ಗೋಡೆಗೇರಿ, ಪಾಶ್ಚಾಪುರ, ಬಸ್ತವಾಡ ಹಾಗೂ ಇನ್ನೂ ಕೆಲ ಹೈಸ್ಕೂಲು ಹಾಗೂ ಕಾಲೇಜಂಗಳಿರುವ ಗ್ರಾಮಗಳಲ್ಲಿ ಸರ್ಕಾರದಿಂದ ಗ್ರಂಥಾಲಯಗಳನ್ನು ಪ್ರಾರಂಭಿಸಲು ಇರುವ ತೊಂದರೆ ಏನು ? ಸುಮಾರು ೨೫ ಸಾವಿರ ಮೇಲ್ಪಟ್ಟಿರುವ ಸಂಕೇಶ್ವರ ಪಟ್ಟಣದಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸಲು ಕಳೆದ ಮೂರು ವರ್ಷಗಳಲ್ಲಿ ಸಾರ್ವಜನಿಕರು ಹಾಗೂ ನಾನು ಅಳಾವೆಗೆ ಕೇಳಿಕೊಂಡರೂ ಕೂಡ ಗ್ರಂಥಾಲಯ ಪ್ರಾರಂಭವಾಗಿಲ್ಲ. ಹುಕ್ಕೇರಿ ತಾಲ್ಲೂಕಿನಲ್ಲಿ ಹೈಸ್ಕೂಲು ಇರುವ ಗ್ರಾಮಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲು ಈ ವರ್ಷ ಸರ್ಕಾರದ ಕಾರ್ಯಕ್ರಮವೇನು ? ಈ ವಿಷಯದಲ್ಲಿ ಶಿಕ್ಷಣಮಂತ್ರಿಗಳು ಸದನದಲ್ಲಿ ಹೇಳಿಕೆ ನೀಡುವಂತೆ ಅವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್.—ಅಧ್ಯಕ್ಷರೇ, ಹಣಕಾಸಿನ ಸ್ಥಿತಿ ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

೭ ಪಾಣಿಮಂಗಳೂರು ಸೇತುವೆಯ ಹತ್ತಿರ ಪೋಲೀಸ್ ಬಂದೋಬಸ್ತ್‌ನ್ನು ಒದಗಿಸುವುದರ ಬಗ್ಗೆ

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪಾಣಿ ಮಂಗಳೂರು ಸೇತುವೆ ರಾಜ್ಯದ ಹೆದ್ದಾರಿಯಲ್ಲಿದೆ. ಚಾರ್ಮಾಡಿ, ಸಿರಾಡಿ ಮಡಿಕೇರಿ ಕಡೆಯ ರಸ್ತೆಗಳ ವಾಹನಗಳು ಇದೇ ರಸ್ತೆಯ ಮೂಲಕ ಸಂಚರಿಸಬೇಕಾಗಿದೆ. ಇದೀಗ ಈ ಪಾಣಿಮಂಗಳೂರು ಸೇತುವೆ ಭಾರಿ ಇಕ್ಕಟ್ಟಾಗಿದ್ದು ವಾಹನಗಳ ಸಂಚಾರಕ್ಕೆ ಭಾರಿ ತೊಂದರೆಯಾಗಿದೆ. ಈ ರಸ್ತೆ ದುರಸ್ತಿ ಮಾಡಂತ ಸಮಾಚಾರ ಕೇಳುತ್ತಿದ್ದರೂ ಇನ್ನೂ ಆಗಿಲ್ಲ. ಈ ಸೇತುವೆಯಲ್ಲಿ ಯಾವುದೇ ಒಂದು ವಾಹನ ಒಂದು ಬದಿಯಿಂದ ದಾಟಿದ ಮೇಲೆಯೇ ಇನ್ನೊಂದು ಬದಿಯಿಂದ ಮತ್ತೊಂದು ಚಲಿಸಬೇಕಾಗಿದೆ. ದಿನನಿತ್ಯ ವಾಹನ ಸಂಚಾರದ ಒತ್ತಡ ಹೆಚ್ಚು ಹೆಚ್ಚಾಗಿದೆ. ಹೆರಿಗೆ ನೋವಿನ ಹೆಂಗಸರನ್ನು ಇನ್ನಿತರ ರೋಗಿಗಳನ್ನು ತೆಗೆದುಕೊಂಡು ಹೋಗಲು ಇಲ್ಲಿಯ ನೂಕಾನುಗ್ಗಲು ಒತ್ತಡದಿಂದ ತಾಸುಗಟ್ಟಲೆ ಕಾಯಬೇಕಾಗುತ್ತದೆ. ಇಲ್ಲಿಯವರೆಗೆ ಒತ್ತಡ ಎಲ್ಲಿಯವರೆಗೆಂದರೆ ದಿನನಿತ್ಯ ಜಗಳ ಗಲಾಟೆಗಳು ಕೂಡ ನಡೆಯುತ್ತಿವೆ. ಇಲ್ಲಿನ ದಿನನಿತ್ಯದ ದೃಶ್ಯ ಅತ್ಯಂತ ಕರುಣಾಜನಕವಾಗಿರುತ್ತದೆ, ಆದಕಾರಣ ಈ ಒತ್ತಡ ಜಗಳ ಗಲಾಟೆ ತಪ್ಪಿಸಬೇಕಾದದ್ದು ಅತ್ಯಂತ ಪ್ರಾಮುಖ್ಯ. ಅತಿ ತ್ವರಿತವಾಗಿ ಈ ಸೇತುವೆಯಲ್ಲಿ ಪೋಲೀಸ್ ಬಂದೋಬಸ್ತ್ ಇಡುವುದು ಅಗತ್ಯ. ಆ ರೀತಿ ಪೋಲೀಸ್ ಬಂದೋಬಸ್ತ್ ಇಟ್ಟು ಜನರಿಗೆ ಒದಗುವ ಕಷ್ಟ ತೊಂದರೆಗಳನ್ನು ಶೀಘ್ರ ನೀಗಿಸುವುದು ಜರೂರಿನ ಕಾರ್ಯವಾಗಿರುತ್ತದೆ. ಈ ಕುರಿತು ಗೃಹಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ.—ದಕ್ಷಿಣ ಕನ್ನಡ ಜಿಲ್ಲೆಯ ಪಾಣಿ ಮಂಗಳೂರಿನ ಬಳಿ ನೇತ್ರಾವತಿ ನದಿಯ ಮೇಲೆ ರಾಷ್ಟ್ರೀಯ ಹೆದ್ದಾರಿಗಳ ಮೇಲೆ ಒಂದು ಹಳೆಯ ಸೇತುವೆ ಇದ್ದು, ಅದರ ಅಗಲ ತೀರಾ ಕಡಿಮೆ ಇದೆ. ಅದರಿಂದಾಗಿ ಆಗಾಗ್ಗೆ ಸಂಚಾರ ಸ್ಥಗಿತಗೊಳ್ಳುತ್ತಿದೆ. ಈ ಹೆದ್ದಾರಿಯಲ್ಲಿ ಸಂಚಾರ ದಿನೇ ದಿನೇ ಜಾಸ್ತಿಯಾಗುತ್ತಿರುವುದರಿಂದ ಇನ್ನೊಂದು ಸೇತುವೆಯನ್ನು ನಿರ್ಮಿಸುವ ಅಗತ್ಯ ಬಂದಿದ್ದು ರಾಷ್ಟ್ರೀಯ ಹೆದ್ದಾರಿ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ಹೊಸ ಸೇತುವೆಯನ್ನು ಕಟ್ಟಲು ರೂ ೪ ಕೋಟಿ ವೆಚ್ಚದ ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸಿ ದೆಹಲಿಯ ಭೂಸಾರಿಗೆ ಮಂತ್ರಾಲಯಕ್ಕೆ ಕಳುಹಿಸಿದ್ದಾರೆ ಎಂದು ತಿಳಿದು ಬಂದಿದೆ.

ಪ್ರಸ್ತುತ ಸಮಸ್ಯೆಯನ್ನು ಬಗೆಹರಿಸಲು ಸೇತುವೆಯ ಎರಡೂ ಕಡೆ ಟ್ರಾಫಿಕ್ ಸಿಗ್ನಲ್‌ಗಳನ್ನು ಸ್ಥಾಪಿಸುವ ಬಗ್ಗೆ ಬೆಂಗಳೂರು ಐ. ಟಿ. ಐ. ನಿಂದ ಅಂದಾಜುಗಳನ್ನು ಪಡೆದು ಮಂಗಳೂರು ರಾಷ್ಟ್ರೀಯ ಹೆದ್ದಾರಿ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಗೆ ಕಳುಹಿಸಲಾಗಿದೆ.

ಈ ಸೇತುವೆಯ ಮೇಲೆ ಸಂಚಾರವನ್ನು ನಿಯಂತ್ರಿಸಲು ಬಂಟ್ವಾಳ ಪೋಲೀಸ್ ಸಿಬ್ಬಂದಿಯನ್ನು ಕಳುಹಿಸಲಾಗುತ್ತಿದೆ. ಮುಂದೆ ಹೊಸ ಸೇತುವೆ ಕಟ್ಟುವ ತನಕ ಇಲ್ಲಿನ ಸಂಚಾರವನ್ನು ನಿಯಂತ್ರಿಸಲು ಅಧಿಕ ಸಿಬ್ಬಂದಿಯನ್ನು ಒದಗಿಸುವುದನ್ನು ಪರಿಶೀಲಿಸಲಾಗುವುದು.

೮. ಗುಲ್ಬರ್ಗಾ ಜಿಲ್ಲೆಯಲ್ಲಿ ತೀವ್ರ ಬಿಸಿಲಿನ ತಾಪದಿಂದ ಮೃತಪಟ್ಟವರಿಗೆ ಪರಿಹಾರ ಹಂತ್ತು ಇದನ್ನು ತಡೆಗಟ್ಟಲು ಹೆಚ್ಚಿನ ರೀತಿಯಲ್ಲಿ ಗಿಡಮರಗಳನ್ನು ಬೆಳೆಸುವ ಬಗ್ಗೆ

ಶ್ರೀ ಸಿ. ವೀರಯ್ಯ ಸ್ವಾಮಿ.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಬಿಸಿಲ ಬೇಗೆಯಿಂದ ಈವರೆಗೆ ಇಬ್ಬರು ವ್ಯಕ್ತಿಗಳು ಮರಣ ಹೊಂದಿದ್ದು ವರ್ತಮಾನ ಪತ್ರಿಕೆಗಳ ಮುಖಾಂತರ ಎಲ್ಲರಿಗೂ ತಿಳಿದ ವಿಷಯ. ಈ ರೀತಿ ದುರ್ಮರಣಕ್ಕೆ ತುತ್ತಾದವರ ಕುಟುಂಬದವರಿಗೆ ಮಾನ್ಯ ಮುಖ್ಯಮಂತ್ರಿಯವರ ನಿಧಿಯಿಂದ ಪರಿಹಾರಧನವನ್ನು ಒದಗಿಸದಿದ್ದರೆ ಕೂಡಲೇ ಒದಗಿಸ ಬೇಕೆಂದು ಒತ್ತಾಯಿಸುತ್ತೇನೆ.